C.R.P.67
Form No.4 (Civil)
Deposition Sheets
(R.P.No.57)

ದಿನಾಂಕಃ 21.11.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನಿನ್ನೆಯ ದಿವಸ ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷಿಯಲ್ಲಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿರುತ್ತೇನೆ.

ಈಗ ನನಗೆ ನ್ಯಾಯಾಲಯದ ವಿ.ಸಿ. ಮೂಲಕ ತೋರಿಸಿದ ಮಂಡ್ಯ ಉಪ ಕಾರಾಗೃಹದಲ್ಲಿ ಇರುವ ಆರೋಪಿಯನ್ನು ನಾನು ಈ ಹಿಂದೆ ನೋಡಿರುತ್ತೆನೆ. ಸಾಕ್ಷಿಯು ಆರೋಪಿಯನ್ನು, ನ್ಯಾಯಾಲುದ ವಿಸಿ ಮೂಲಕ ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) 22.06.2021 ರಂದು ನಾನು ಮನೆಯಲ್ಲಿ ಇರುವಾಗ ಬೆಳಿಗ್ಗೆ ಆರೋಪಿ ಮಂಜು ರವರು ನನಗೆ, ನಾನು ಮಂಡ್ಯಕ್ಕೆ ಹೋಗಿ ಬರಬೇಕಾಗಿದೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆಗ ನಾನು ಅಲ್ಲಿಗೆ ಯಾಕೆ ಹೋಗುತ್ತಿದ್ದೀಯಾ ಎಂದು ಕೇಳಿದ್ದೆನು ಎಂದರೆ ಸರಿಯಲ್ಲ. ಆಗ ಆರೊಪಿ ಮಂಜು ರವರು, ಅಕ್ಷಯ್ ಅಂತ ನನ್ನ ಫ್ರೆಂಡ್ ಇದ್ದಾರೆ, ಅವರನ್ನು ನೋಡಿಕೊಂಡು ಸಂಜೆ ಬರುತ್ತೇನೆ ಎಂದು ಹೇಳಿ, ಅವರ ಡಿಯೋ ಸ್ಕೂಟರ್ ನ್ನು ಸ್ಟ್ರಾಟ್ ಮಾಡಿಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ನಂತರ ಆ ದಿವಸ ಆರೋಪಿ ಮಂಜು ಮನೆಗೆ ಬಂದಿರಲಿಲ್ಲ ಎಂರದೆ ಸಾಕ್ಷಿಯು, ನಾನು ಇರಲಿಲ್ಲ ಎನ್ನುತ್ತಾರೆ.

2) ದಿಃ 28.06.2021 ರಂದು ಪೊಲೀಸರ ವಿಚಾರಣಾ ಕಾಲದಲ್ಲಿ, ಈಗ ನನಗೆ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೆನು ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ.91 ಎಂದು ಗುರುತಿಸಲಾಯಿತು. ಆ ದಿವಸ ಆರೋಪಿ ಮಂಜು ರವರು ನನ್ನ

ಸಮಕ್ಷಮದಲ್ಕೆಸ್ಕೂಟರ್ ನ್ನು ಸ್ಟ್ರಾಟ್ ಮಾಡಿಕೊಂಡು ಮಂಡ್ಯಕ್ಕೆ ಹೊರಟು ಬಂದಿದ್ದರೂ ಕೂಡ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಹೆಚ್ ಪಿ ಎಸ್ ವಕೀಲರಿಂದಃ</u>

1) ನಾನು ಬಾಡಿಗೆ ಮನೆಯಲ್ಲಿ ಇರುವುದಕ್ಕೆ ಸಂಬಂಧಪಟ್ಟಂತೆ ಬಾಡಿಗೆ ಕರಾರು ಪತ್ರವನ್ನು ಮಾಡಿಸಿಕೊಂಡಿಲ್ಲ. ನನ್ನ ಮನೆಯ ಮಾಲಿಕರ ಹೆಸರು ನೆನಪಿಲ್ಲ. ಮನೆಯ ಬಾಡಿಗೆ ಅಡ್ವಾನ್ಸ್ 20 ಸಾವಿರ, ಮನೆಯ ತಿಂಗಳು ಬಾಡಿಗೆ 2,500/- ರೂ. ನಾನು ಬಾಡಿಗೆ ಮನೆಯಲ್ಲಿ ಇರುವ ಬಗ್ಗೆ ಗುರುತಿಗಾಗಿ ಪೊಲೀಸರು ನ ನ್ನಿಂದ ದಾಖಲೆಯನ್ನು ಪಡೆದುಕೊಂಡಿದ್ದರಾ ಎಂಬ ಪ್ರಶ್ನೆಗೆ ಸಾಕ್ಷಿಯು ಆ ಬಾಡಿಗೆ ಮನೆಯಲ್ಲಿ ನಾನು ವಾಸ ಇರಲಿಲ್ಲ, ಊರಿನಲ್ಲಿ ವಾಸವಿದ್ದೆ ಎಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿಯನ್ನು ನೋಡುವುದಕ್ಕೆ ನಾನು ಜೈಲಿಗೆ ಒಂದು ಸಲ ಹೋಗಿದ್ದೆನು. ಈ ಪ್ರಕರಣದ ಬಗ್ಗೆ ಆರೋಪಿಗೆ ನಾನು ಏನು ಕೇಳಲಿಲ್ಲ. ನನ್ನ ಭಾಮೈದ ಆದ ಆರೋಪಿ ಮಂಜು ರವರು, ಅರೆಸ್ಟ ಆಗಿದ್ದ ಕಾರಣ, ನಾನು ಆತನನ್ನು ನೋಡಲು ಮಂಡ್ಯದ ರೂರಲ್ ಪೊಲೀಸ್ ಠಾಣೆಗೆ ಹೋಗಿದ್ದೆನು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನುಡಿಯುತ್ತಾರೆ, ಮಹಜರ್ಗಾಗಿ ನನ್ನನ್ನು ಠಾಣೆಗೆ ಕರದಿದ್ದರು ಎಂದು. ಎಲ್ಲಿ, ಯಾವ ಮಹಜರ್ ಎಂದು ಹೇಳಲು ಆಗುವುದಿಲ್ಲ. ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದರು. ನನ್ನ ಹೇಳಿಕೆಯಲ್ಲಿ, ಆರೋಪಿ ನಿಮ್ಮ ಮನೆಯಲ್ಲಿ ಇದ್ದನಾ ಎಂದು ಕೇಳಿದ್ದರು, ನಾನು ಹೌದು ಎಂದು ಹೇಳಿದ್ದೆನು. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಬಾಡಿಗೆ ಮನೆ ಮಾಲಿಕರು ನನಗೆ ಏನನ್ನು ಕೇಳಿರಲಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ, ಪೊಲೀಸರು ನನ್ನ ಹೆಂಡತಿಯನ್ನು ವಿಚಾರಣೆ ಮಾಡಿಲ್ಲ. ನನ್ನ ಹೆಂಡತಿ House wife. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ, ಬಾಡಿಗೆ ಮನೆಯ ಅಕ್ಕ ಪಕ್ಕದವರು ನನಗೆ ಏನು ಕೇಳಲಿಲ್ಲ. ಸಾಮಾನ್ಯವಾಗಿ ಬಾಡಿಗೆ ಮನೆಯಲ್ಲಿ ಇರಬೇಕಾದರೆ ಬಾಡಿಗೆ ಕರಾರು ಪತ್ರವನ್ನು ಮಾಡಿಸಬೇಕು ಎಂದರೆ ಸರಿ. ನಾನು ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಗೆ ಯಾವ ದಿನಾಂಕದಂದು ಬಂದಿದ್ದೆನು ಎಂದು ನೆನಪಿಲ್ಲ. ನನ್ನ ಹೆಂಡತಿಯ ಹೆಸರುಚೈತ್ರ ಎಂ. ನನ್ನ ಸಮಕ್ಷಮದಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ, ಬೇರೆ ಯಾರನ್ನು ವಿಚಾರಣೆ ಮಾಡಲಿಲ್ಲ. ದಿಃ 22.06.2021 ರಂದು ನಾನು ಊರಲ್ಲಿ ಇದ್ದೆನು ಎಂದು ಹೇಳಿದ್ದೆನು ಎಂದರೆ ಸರಿ. ಆ ದಿವಸ ನಾನು ಡ್ರೈವಿಂಗ್ ಕೆಲಸಕ್ಕೆ ಹೋಗಿದ್ದೆ ಎಂದು ಪೊಲಿಸರಿಗೆ ಹೇಳಿರಲಿಲ್ಲ.

<u>ಮರು ವಿಚಾರಣೆಃ</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.